


ಬರಹಗಾರರು: Edward Hughes
ಚಿತ್ರಲೇಖಕರು: Byron Unger; Lazarus
ಪದ್ಮಾ ಸೈಲೇಸ್: Padma Silas
ಅಳವಡಿಸುವವರು: M. Maillot; Tammy S.

60ರ 3ನೇ ಕಥೆ

**M1914.org**

**Bible for Children, PO Box 3, Winnipeg MB  R3C 2G1  Canada**

ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.






















ನೋಹ ಮತ್ತು ಮಹಾ ಜಲಪ್ರಳಯ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಆದಿಕಾಂಡ 6 – 10 ಆದ್ಯಾಯಗಳು

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.

ಕನ್ನಡ Kannada


ದೇವರು ನೋಹನಿಗೆ ತಾನು ಭೂಮಿಯ ಮೇಲೆ ಕಳುಹಿಸಲಿರುವ ಜಲಪ್ರಳಯದ ಕುರಿತು ಹೇಳಿದನು. ದೇವರು ಅವನಿಗೆ “ನೀನು ಕಟ್ಟಿಗೆಯಿಂದ ಒಂದು ದೊಡ್ಡ ನಾವೆ (ಹಡಗು) ಯನ್ನು ಮಾಡಬೇಕು. ಅದು ನಿನಗೂ ನಿನ್ನ ಕುಟುಂಬಕ್ಕೂ ಹಾಗು ಅನೇಕ ಪ್ರಾಣಿಗಳಿಗೂ ಸಾಕಾಗುವಷ್ಟು ದೊಡ್ಡದಿರಬೇಕು,” ಎಂದು ಅಪ್ಪಣೆಯನ್ನು ಕೊಟ್ಟನು.
3
ನಾವೆಯನ್ನು ಮಾಡುವದಕ್ಕೆ ಬೇರೆ ಎಲ್ಲಾ ವಿವರಗಳನ್ನು ತಿಳಿಸಿಕೊಟ್ಟನು. ದೇವರ ಮಾತಿಗೆ ವಿಧೇಯನಾಗಿ ನೋಹನು ನಾವೆಯನ್ನು ಸಿದ್ಧಮಾಡತೊಡಗಿದನು.
4
ನೋಹನು ನಾವೆಯನ್ನು ಮಾಡುವದನ್ನು ನೋಡಿ ಜನರು ಅವನಿಗೆ ಹಾಸ್ಯ ಮಾಡಿರಬಹುದು. ಆದರೆ ನೋಹನು ತನ್ನ ಕೆಲಸವನ್ನು
ನಿಲ್ಲಿಸಲಿಲ್ಲ. ಅವನು ಜನರಿಗೆ ದೇವರ ಕುರಿತು ತಿಳಿಸಿದನು. ಆದರೆ ಯಾರೂ ಅವನ ಮಾತಿಗೆ ಕಿವಿಗೊಡಲಿಲ್ಲ.
5
ನೋಹನು ನಂಬಿಕೆಯ ವೀರನಾಗಿದ್ದನು. ದೇವರ ಮೇಲೆ ಅಪಾರ ನಂಬಿಕೆಯಿಟ್ಟಿದ್ದನು. ಅವನ ದಿನಗಳಲ್ಲಿ ಮಳೆ ಬೀಳುತ್ತಿರಲಿಲ್ಲ. ದೇವರು ನಾಲ್ವತ್ತು ದಿನಗಳವರೆಗೆ ಸತತವಾಗಿ ಮಳೆ ಕಳುಹಿಸುವೆನೆಂದು ಹೇಳಿದ ಮಾತನ್ನು ನೋಹನು ನಂಬಿದನು.
6
ಕಡೆಗೆ ನಾವೆಯು ಸಿದ್ಧವಾಯಿತು. ನೋಹನು, ಅವನ ಮಕ್ಕಳು ಅದರಲ್ಲಿ ಆಹಾರ ಧಾನ್ಯಗಳನ್ನು ತುಂಬಿಸಿದರು.
7
ಜನರು ನೋಡುತ್ತಿದ್ದ ಹಾಗೆಯೇ ಅನೇಕ ಪ್ರಾಣಿಗಳು, ಪಕ್ಷಿಗಳು ನಾವೆಯ ಬಳಿಗೆ ಬಂದವು. ಕೆಲವು ಜಾತಿಗಳಲ್ಲಿ ಏಳು ಜೋಡಿಗಳು ಮತ್ತು ಉಳಿದವುಗಳೆಲ್ಲ ಒಂದೊಂದು ಜೋಡಿಯಾಗಿ ಬಂದವು. ದೊಡ್ಡ, ಚಿಕ್ಕ ಪಕ್ಷಿಗಳು, ದೊಡ್ಡ ಸಣ್ಣ ಪ್ರಾಣಿಗಳು ನಾವೆಯ ಬಳಿಗೆ ಬಂದವು.
8
ಬಂದ ಪ್ರಾಣಿಗಳನ್ನು ಮತ್ತು ಪಕ್ಷಿಗಳನ್ನು ನೋಹನು ನಾವೆಯಲ್ಲಿ ಸೇರಿಸುತ್ತಿರುವಾಗ ಜನರು ತಮ್ಮ ಬಾಯಿಗೆ ಬಂದ ಹಾಗೆ ನೋಹನನ್ನು ಬೈದಿರ ಬಹುದು.
9
ಅವರು ದೇವರ ವಿರೋಧವಾಗಿ ಪಾಪಮಾಡುವದನ್ನು ನಿಲ್ಲಿಸಲಿಲ್ಲ. ತಾವು ನಾವೆಯ ಬಳಿಗೆ ಬರಲಿಲ್ಲ.
10
ಪ್ರಾಣಿ– ಪಕ್ಷಿಗಳೆಲ್ಲವೂ ನಾವೆಯೊಳಗೆ ಸೇರಿದವು. ದೇವರು ನೋಹನಿಗೆ,
“ನೀನು ನಿನ್ನ ಕುಟುಂಬದೊಂದಿಗೆ ನಾವೆಯೊಳಗೆ ಸೇರಿಕೋ” ಎಂದು ಹೇಳಿದನು. ನೋಹನು ತನ್ನ ಹೆಂಡತಿ, ಮೂರು ಗಂಡು ಮಕ್ಕಳು ಮತ್ತು ಮೂವರು ಸೊಸೆಯರೊಂದಿಗೆ ನಾವೆಯೊಳಗೆ ಸೇರಿಕೊಂಡನು. ದೇವರು ನಾವೆಯ ಬಾಗಿಲನ್ನು ಮುಚ್ಚಿದನು!
11
ಏಳು ದಿನಗಳನಂತರ ಭೂಮಿಯ ಮೇಲೆ ಮಳೆಯು ಜೋರಾಗಿ ಸುರಿಯ ತೊಡಗಿತು. ಸತತವಾಗಿ ನಾಲ್ವತ್ತು ಹಗಲು ಮತ್ತು ನಾಲ್ವತ್ತು ರಾತ್ರಿ ಮಳೆ ಸುರಿಯಿತು.
12
ಭೂಮಿಯ ಮೇಲೆ ಎಲ್ಲಾ ಕಡೆಗಳಲ್ಲಿ ಮಳೆಯ ಸುರಿಯುತ್ತಿದ್ದದರಿಂದ ಎಲ್ಲಾ ಹಳ್ಳಿಗಳು, ಪಟ್ಟಣಗಳು ನೀರಿನಲ್ಲಿ ಮುಚ್ಚಿ ಮುಳುಗಿ ಹೋದವು.
13
ಮಳೆಯು ನಿಂತು ಹೋದ ಮೇಲೆ ನೋಡಿದರೆ ಎಲ್ಲೆಲ್ಲೂ ನೀರೇ ನೀರು! ಅತೀ ಎತ್ತರವಾದ ಪರ್ವತಗಳು ಕೂಡ ನೀರಿನಲ್ಲಿ ಮುಚ್ಚಿ ಹೋಗಿದ್ದವು. ಉಸಿರಾಡುವ ಪ್ರತಿಯೊಂದು ಜೀವಿಯು ಸತ್ತು ಹೋಗಿತ್ತು.
14
ನೀರು ಹೆಚ್ಚಿದಂತೆ ನಾವೆಯು ನೀರಿನ ಮೇಲೆ ತೇಲಾಡಿತ್ತು. ನಾವೆಯೊಳಗೆ ಕತ್ತಲಿದ್ದರ ಬಹುದು. ನೀರಿನ ಮೇಲೆ ತೇಲಾಡುತ್ತಿದ್ದರಿಂದ ಅದು ಅಲ್ಲಾಡತ್ತಿದ್ದಿರ ಬಹುದು, ಆದರೂ ನೋಹನಿಗೆ ಮತ್ತು ಅವನೊಂದಿಗಿದ್ದವರಿಗೆಲ್ಲಾ ನಾವೆಯು ಪ್ರಳಯದಿಂದ ರಕ್ಷಣೆನೀಡಿತು.
15
ಐದು ತಿಂಗಳ ವರೆಗೆ ಪ್ರಳಯದ ನೀರು ಭೂಮಿಯ ಮೇಲೆ ತುಂಬಿತು. ನಂತರ ದೇವರು ಗಾಳಿ ಬೀಸುವಂತೆ ಮಾಡಿದ್ದರಿಂದ ನೀರು ಕಡಿಮೆಯಾಗುತ್ತಾ ಬಂತು. ಹತ್ತನೆಯ ತಿಂಗಳಲ್ಲಿ ನಾವೆಯು ಅರಾರಾಟ್ ಬೆಟ್ಟಗಳಲ್ಲಿ ನಿಂತಿತು. ಮತ್ತೆ ನಾಲ್ವತ್ತು ದಿನಗಳವರೆಗೆ ನೋಹನು ನಾವೆಯಲ್ಲಿಯೇ ಉಳಿದನು.
16
ನೋಹನು ನಾವೆಯ ಕಿಟಕಿಯನ್ನು ತೆರೆದು ಒಂದು ಕಾಗೆಯನ್ನು ಮತ್ತು ಒಂದು ಪರಿವಾಳವನ್ನು ಹೊರಕ್ಕೆ ಬಿಟ್ಟನು. ಭೂಮಿಯ ಮೇಲೆ ನೀರು ಇನ್ನೂ ಇದ್ದದರಿಂದ ಪಾರಿವಾಳವು ತಿರುಗಿ ನಾವೆಗೆ ಬಂತು.
17
ಒಂದು ವಾರದ ನಂತರ ನೋಹನು ತಿರುಗಿ ಪಾರಿವಾಳವನ್ನು ಹೊರಕ್ಕೆ ಬಿಟ್ಟನು. ಸಂಜೆಯ ಸಮಯಕ್ಕೆ ಆ ಪಾರಿವಾಳವು ತನ್ನ ಬಾಯಿಯಲ್ಲಿ ಎಣ್ಣೇ ಮರದ ಹೊಸ ಚಿಗುರು ಹಿಡಿದುಕೊಂಡು ಬಂದಿತು. ಮತ್ತೆ ಒಂದು ವಾರದನಂತರ ನೋಹನು ಪಾರಿವಾಳವನ್ನು ಹೊರಕ್ಕೆ ಬಿಡಲು ಅದು ಹಿಂದಕ್ಕೆ ಬರಲಿಲ್ಲ. ಭೂಮಿಯು ಒಣಗಿದೆ ಎಂದು ನೋಹನು ತಿಳಿದುಕೊಂಡನು.
18